


ಫೆಬ್ರವರಿ 2016

ಕಾನನ

ನಿಸರ್ಗದೆಡೆಗೆ ಪಯಣ

BANNERUGHATTA

WILDLIFE
CONSERVATION
GROUP

ಕಾನನ

ನಿಸರ್ಗದೆಡೆಗೆ ಪಯಣ



ಮುಖಪುಟ

ಚಿರತೆ

ಫೆಬ್ರವರಿ 2016

WILDLIFE CONSERVATION GROUP



* ಆನೆ ಮೀನು
* ಆರೋಗ್ಯಕರ ಮಣ್ಣು ಬೆಳೆಯುವುದು
* ಅದೇನದು ಇಯರ್ ಫೋನೋ? ಹೆಡ್ ಫೋನೋ? ಅದನ್ನು ನಾಡಿನಲ್ಲಿಯೇ ಬಿಸಾಕಿ ಹೋಗಿ
* ಕತ್ತಲೆಕಾನು
* ಪ್ರಕೃತಿ ಬಿಂಬ

ಲೇಖಕ ವೃಂದ

ಶಿವಕುಮಾರ್ .ಬಿ

ಜೈಕುಮಾರ್ .ಆರ್

ಧನಂಜಯ ಜೀವಾಳ .ಬಿ .ಕೆ

ಅನಿಕೇತನ

ಕಾರ್ತಿಕ್ .ಎ .ಕೆ

ವಿನ್ಯಾಸ
ಅಶ್ವಥ .ಕೆ.ಎನ್


ಮುಖಪುಟ ಛಾಯಾಚಿತ್ರ
ಕಾರ್ತಿಕ್ .ಎ .ಕೆ

ಪರಿಷ್ಕರಣೆ
ಮುರಳಿ .ಎಸ್



ಆನೆ ಮೀನು

ದಸರಾ ರಜೆಯ ಪ್ರಯುಕ್ತ ಊರಿಗೆ ಹೋಗಿದ್ದೆ. ಅವತ್ತು ಊರ್ನಲ್ಲಿ ಏನೂ ಕೆಲ್ಸ ಇಲ್ಲದ ಕಾರಣ, ಅರಾಮವಾಗಿ ಅಡ್ಡಾಡ್ಕೊಂಡು ಇದ್ದೆ. ನಮ್ ಚಿಕ್ಕಪ್ಪ ಬಂದು, ಲೋ....ಶಿವು ಇವತ್ತು ಪುರ್ಸೋತ್ತಾಗಿದ್ದೀವಿ, ಬಿಸಿಲ್ ಬೇರೆ ಆಗದೆ... ಹೊಳೆ ಕಡೆ ಹೋಗ್ಬರೋಣ್ವ ಅಂದ್ರು. ಹೊಳೆ ಕಡೆ ಅಂದ ತಕ್ಷಣ ನನ್ಗೆ ಗೊತ್ತಾಯ್ತು, ಓ...ಮೀನು ಹಿಡಿಯೋದ್ಕೆ ಅಂತ. ತಕ್ಷಣ ನಾನು ಸರಿ ಹಾಗಾದ್ರೆ, ಬಲೆ ಚೆನ್ನಾಗೈತಾ ಎಂದೆ. ಲೋ ಇದು ಹೊಸ್ದು, ಹಳೆ ಬಲೆ ಟೆಂಡರ್ ನನ್ ಮಕ್ಳು ಕಿತ್ಕೊಂಡ್ ಹೋಗ್ ಬಿಟ್ರು. ಇದು ಹೊಸ್ದು ಚೆನ್ನಾಗೈತೆ ಅಂದ್ರು. ಟೆಂಡರ್ನವ್ರು ಅಂದ್ರೆ ನಮ್ಮ ಕಬಿನಿ ಹಿನ್ನೀರಿನಲ್ಲಿರುವ ಮೀನುಗಳನ್ನು ಹಿಡಿಯೋದ್ಕೆ ಒಬ್ಬ ಸರ್ಕಾರದಿಂದ ಟೆಂಡರ್ ತಕ್ಕೋಂಡು ಮೀನು ಹಿಡಿಯಲು ವಹಿಸ್ಕೊಂಡಿರ್ತಾರೆ. ಅವ್ನು ನಮ್ಮಂತವ್ರು ಹಿಡಿತಾರ್ ಅಂತ ಕೆಲವು ಮಂದಿ ಆಳುಗಳನ್ನ ಅಲ್ಲಲ್ಲಿ ಕಾಯೋದ್ಕ ಬಿಟ್ಟಿರ್ತಾನೆ, ನಾವು ಅವ್ರ ಕಣ್ ತಪ್ಸಿ ಹಿಡಿಯೋದು ತುಂಬಾ ಕಷ್ಟದ ಕೆಲ್ಸ.



ಸರಿ ಅಂತ ನಾನು ಮೀನ್ ತಿಂದು ಸುಮಾರ್ ದಿನ ಆಗಿತ್ತು. ಅದ್ಕೆ, ಇವತ್ತು ಸಿಕ್ಕಿದ್ರೆ ಚೆನ್ನಾಗ್ ತಿಂದ್ ಬಿಡೋಣ ಅಂತ ಇಬ್ರೂ ಬಲೆ ತಕ್ಕೊಂಡು, ಆ ಬಿಸ್ಲಿಗೆ ಇಬ್ರೂ ರೌಂಡ್ ಟೋಪಿ ಹಾಕ್ಕೊಂಡು ಹೊಳೆಕಡೆ ಹೊಂಟ್ವಿ. ನಾವು ಹೋಗೋದಕ್ಕೋ ಏನೋ ಆ ಬಿಸ್ಲು! ನಾವು ನೀರ್ನಲ್ಲಿ ಮುಳುಗಿ ಎದ್ದವ್ರ ರೀತಿ ನಮ್ ದೇಹದಿಂದ ಬೇವ್ರು ಬರ್ತಿತ್ತು. ಆದ್ರು ನನ್ಗೆ ಮೀನ್ ತಿನ್ನೋದ್ಕಿಂತ ಮೀನ್ ಹಿಡಿಯೋದ್ ಅಂದ್ರೆ ತುಂಬಾ ಇಷ್ಟ. ಏಕಂದ್ರೆ, ನಮ್ ಕಣ್ಮುಂದೆ ಮೀನ್ನ ಓಡ್ಸಿ, ಅವು ಗುಂಪಿನಲ್ಲಿ ಸಿಕ್ಕಿಕೊಳ್ಳೋದು, ಅವುಗಳ್ನ ಎಣಿಸುತ್ತಾ ಬಿಡ್ಸೋದು, ಇನ್ನು ಏನೇನೋ ಆಟಗಳು. ನಮ್ ಚಿಕ್ಕಪ್ಪ ಯಾವಾಗ್ಲು... ಪಂಚೆನೇ ಹಾಕ್ಕೊಳ್ಳದು. ಆದ್ರೆ ಮೀನ್ ಹಿಡಿಯೋದ್ಕೆ ಮಾತ್ರ ಪ್ಯಾಂಟ್ ಹಾಕೊಂತಾರೆ. ಯಾಕಂದ್ರೆ, ನೀರ್ನಲ್ಲಿ ಜಾಸ್ತಿ ಹೊತ್ತು ನಿಲ್ಲೋದ್ರಿಂದ ಕಾಲು ನವೆ ಬರ್ತದಂತೆ. ಕಬಿನಿ ಹಿನ್ನೀರ್ನಲ್ಲಿ, ಮೀನು ಹಿಡಿಯೋದ್ಕೆ ಕೆಲವು ಜಾಗಗಳನ್ನು ಕೆಲವು ಹೆಸರುಗಳಿಂದ ಗುರುತು ಮಾಡ್ಕೊಂಡವ್ರೆ. ಕೆರೆ ಗೋಟು, ಉಯ್ಯಂಬಳ್ಳಿ ಗೋಟು, ಬಿದ್ರಳ್ಳಿ ಗೋಟು,ಇತ್ಯಾದಿ...



ನಮ್ ಚಿಕ್ಕಪ್ಪ, ಲೋ..."ಶಿವ ಮೊದ್ಲು ಹಿಂದೆಯಿಂದ ಆಡ್ಕೊಂಡ್ ಬರೋಣ"ಎಂದು, ಕೆರೆ ಗೋಟಿನ ಕಡೆ ಕರ್ಕೊಂಡ್ ಹೋದ್ರು. ನಾನೂ ನಮ್ ಚಿಕ್ಕಪ್ಪ ಇಬ್ರೂ ಪ್ಯಾಂಟ್ ಹಾಕೋಂಡು, ತಲೆಗೆ ರೌಂಡ್ ಟೋಪಿ ಹಾಕೊಂಡು ಹೋಗ್ಬೇಕಾದ್ರೆ, ಯಾರೋ ಒಬ್ಬ ಪಕ್ಕದಲ್ಲಿದ್ದ ಕಬ್ಬಿನ್ ಗದ್ದೆಕಡೆ ಓಡೋದ. ತಕ್ಷಣ ನಾವಿಬ್ರು ಗಾಬ್ರಿಯಾಗಿ ಅಲ್ಲೆ ನಿಂತ್ವಿ. ನಮ್ ಚಿಕಪ್ಪ, ಲೋ.. ಯಾರೋ ಟೆಂಡರ್ನವ್ರೆ ಇರ್ಬೇಕು. ಸರಿಯಾಗಿ ಸುತ್ಲು ನೋಡ್ಕ, ನನ್ ಮಕ್ಳು ಯಾವ್ ಕಡೆ ಯಿಂದ ಬರ್ತಾರೆ ಗೊತ್ತಿಲ್ಲ, ಬೋಟ್ ನಿಂದ ಬೇಕಾದ್ರು ಬರ್ ಬಹುದು ಇಲ್ಲ ಸ್ಕೂಟರ್ ನಿಂದ ಬರ್ ಬಹುದು, ಎಂದು ಕಬ್ಬಿನ ಗದ್ದೆ ಕಡೆ ನೋಡಿದ್ವಿ ಯಾರೂ ಇರ್ಲಿಲ್ಲ. ಸರಿ ಅಂತ ಹೊಳೆ ಅತ್ರ ಹೋಗಿ ನೋಡಿದ್ರೆ, ಅಲ್ಲಿ ಮೂರ್ನಾಲ್ಕು ಮೀನು ಗಾಣಗಳು ಬಿದ್ದಿದ್ವು. ಯಾರೂ ಇರ್ಲಿಲ್ಲ.

ನಮ್ ಚಿಕ್ಕಪ್ಪ, ಲೋ...ಇಲ್ಲಿ ಓಡೋದವ್ರು ಟೆಂಡರ್ ನವ್ರಲ್ಲ ಕಲೋ... ನಮ್ಮಂಗೆ ಯಾವನೋ ಮೀನ್ ಹಿಡಿಯೋದ್ಕೆ ಬಂದಿದ್ದ ಅನ್ಸುತ್ತೆ, ನಮ್ಮನ್ನ ನೋಡಿ ಹೆದುರ್ಕೊಂಡು, ಎದ್ದು ಬಿದ್ದು ಓಡೋಗ್ಬಿಟ್ಟಾವ್ನೆ, ಅಂದ್ರು. ಇಬ್ರೂ ನಗ್ತ ಬಲೆ ಬಿಡೋಕೆ ಹೋದ್ವಿ. ಇಬ್ರೂ ಬಲೆ ಬಿಟ್ತ, ನಾನು ನಿಮಿಷಕ್ಕೆ ಒಂದು ಸಲ ಟೆಂಡರ್ ನವ್ರ ಭಯ, ಹೆದ್ರಿಕೆಯಿಂದ ಸುತ್ತಾ-ಮುತ್ತಾ ನೋಡ್ಕೊತ್ತಿದ್ದೆ. ಯಾಕಂದ್ರೆ, ಟೆಂಡರ್ ನವ್ರ ಕೈಗೆ ಸಿಕ್ಕಾಕೊಂಡ್ರೆ, ಎಲ್ಲಾ ಬಲೆನೂ ಕಿತ್ಕೊಂಡು, ನಾವ್ ಹಿಡಿದಿರೊ ಮೀನ್ ನು ಕಿತ್ಕೊಂಡು, ನಮ್ಮತ್ರ ಇರೋ ಮೊಬೈಲ್, ಹಣ, ಎಲ್ಲಾ ಕಿತ್ಕೊಂಡು, ನಮ್ಗೂ ಚೆನ್ನಾಗಿ ರುಬ್ಬಿ ಕಳಿಸ್ತಾರೆ. ಇದು ನಮ್ಮೂರ್ನಲ್ಲಿ ಕೆಲ್ವು ಜನ್ರಿಗೆ ಆಗ್ಯೆತೆ. ಇದನ್ನ ಮನಸ್ನಲ್ಲಿಟ್ಕೊಂಡು, ಮೀನು ಹಿಡಿತಾ ಇರ್ಬೇಕಾದ್ರೆ, ಸ್ವಲ್ಪ ಹೊತ್ತಾದ್ ಮೇಲೆ, ನಮ್ಮೂರ್ ಕುಮ್ಮಾರಣ್ಣ ಮೆಲ್ಲಗೆ ಕಬ್ಬಿನ್ ಗದ್ದೆಯಿಂದ ಇಣುಕಿ ನೋಡಿ ಲೋ... ಶಿವ ನೀವೇನ್ಲ ಬಂದಿದ್ದು, ಹೇ... ತೂ... ಹೋಗಪ್ಪ ನೀವಿಬ್ರೂ ಹಾಕಿರೊ ಪ್ಯಾಂಟು, ಟೋಪಿ ನೋಡಿ, ಟೆಂಡರ್ ನವ್ರು ಅಂತ ಎದ್ದೂ... ಬಿದ್ದೂ... ಓಡ್ದೆ. ತೂ... ಸೇದಿದ್ ಬೀಡಿ ನಶೇನೂ ಭಯದಿಂದ ಇಳ್ದೋಯಿತು, ಅಂತ ಬೈಕೊಂಡು ಮತ್ತೊಂದ್ ಬೀಡಿ ತಕ್ಕೊಂಡು ಸೇದ್ತಾ ಅವ್ನು ಹಾಕಿದ್ದ ಗಾಣ ನೋಡ್ಕೊಂಡು ಕೂತ್ಕೊಂಡ. ನಾವಿಬ್ರೂ ಎದ್ದೂ...ಬಿದ್ದೂ...ನಗ್ತಾ, ಲೋ... ನಾವು ನೀನು ಓಡ್ದದ್ಕೆ ನೀನು ಟೆಂಡರ್ ನವ್ನು ಅಂತ ಅನ್ಕಂಡ್ವಿ. ನೀನು ನಮ್ಮ ನೋಡಿ ಹೆದುರ್ಕೊಂಡ್ ಓಡೋಗಿದ್ದೀಯಲ್ಲ ಅಂತ ನಗ್ತಾ...ನಗ್ತಾ...ಬಲೆ ಬಿಟ್ಟು ಸ್ವಲ್ಪ ಹೊತ್ತು ಕಾಯ್ಕೊಂಡು ಕೂತ್ಕೊಂಡ್ವಿ.

ಸ್ವಲ್ಪ ಹೊತ್ತಾದ್ ನಂತ್ರ ಕುಮಾರಣ್ಣ ಲೋ... ಬಂಡ್ರೋ... ಬಂಡ್ರೋ... ಅಂತ ಕೂಕೊಂಡ. ನಾವಿಬ್ರು ಭಯ ದಿಂದ, ಓ... ಟೆಂಡರ್ ನವ್ರು ಬರ್ತಿರ್ ಬಹುದು ಅಂತ ಕಬ್ಬಿನ್ ಗದ್ದೆ ಕಡೆ ಓಡ್ತಾ ಇದ್ವಿ. ಮತ್ತೆ, ಕುಮ್ಮಾರಣ್ಣ ಲೋ...

ಶಿವ ಅತ್ತಾಗ್ ಯಾಕ್ ಓಡ್ತಿರೋ, ನನ್ ಗಾಣಕ್ಕೆ ಯಾವ್ದೋ ಸರ್ಯಾಗಿರೋ ಮೀನ್ ಸಿಕ್ಕೈತೆ, ಎಳಿಯೊದ್ಕೆ ಆಗ್ತಿಲ್ಲ, ಬಲೋ... ಎಂದು ಕೂಗ್ದ. ನಾವು, ಛೆ...ತೂ...ಮತ್ತೆ ಇವ್ನು ಕೂಗಿದ್ ನೋಡಿ ಹೆದುರ್ಕೊಬಿಟ್ವಲ್ಲೋ, ಅಂತ ಅವ್ನ ಬೈಕೊಂಡು ಇಬ್ರೂ ಓಡೋಗಿ ಅವ್ನ ಗಾಣ ಎಳಿದ್ವಿ.




ಆದ್ರೂ... ಆ ಮೀನ್ನ ಎಳಿಯೊಕ್ ಆಗ್ತಿಲ್ಲ. ಆದ್ರೂ... ಹೆಂಗೋ, ದಬಾಯ್ಸಿ ಎಳೆದ್ವಿ. ಆ ಮೀನ್ನ ಎಳಿತಾ ಇದ್ರೆ, ಹತ್ರಕ್ಕೆ ಬರ್ತಾ...ಬರ್ತಾ...ನನ್ ಕಣ್ಣಿಗೆ ಯಾವ್ದೋ ಮೊಸಳೆ ಸಿಕ್ಕಾಕೊಂಡಿರ್ಬೇಕು!, ಹಾಗೇ ಕಾಣುಸ್ತು. ಹತ್ರಕ್ಕೆ ಬಂದಾಗ ಒಂದು ಭಾರೀ... ಗಾತ್ರದ ಮೀನು ಕಾಣುಸ್ತು. ನಾನು ಅಣೋ... ಇದೇನಣ್ಣ ಇಷ್ಟ್ ದಪ್ಪ ಐತೆ ಇದು, ಇವತ್ತು ಒಳ್ಳೆ ಮೀನು ಬಿಡಣ್ಣೋ... ಎಂದೆ. ನಮ್ ಚಿಕ್ಕಪ್ಪ ನಗ್ತಾ, ಲೋ... ಆನೆ ಮೀನು ಕಂಡ್ಯ, ಅಂದ್ರು. ಕುಮಾರಣ್ಣ, ತುಂಬಾ ಬೇಸರದಿಂದ ತೂ... ಬಡ್ಡೇದು, ಹಾಳಾದ್ದು, ಇದ್ಯಾಕ್ಲ ಸಿಕ್ತು ಇದು ಅಂತ ಬೈಕೊಂಡು ಅದ್ರ ಬಾಯಿಯಿಂದ ಗಾಣ ಬಿಡಿಸ್ತಾ ಕೂತ್ಕೊಂಡ. ನಾನು ಅಲ್ಲ... ಯಾಕಣ್ಣ, ಈ ಮೀನ್ನ ಯಾರೂ ತಿನ್ನಲ್ವ ಅಂದೆ. ಅದ್ಕೆ ಅವ್ನೂ, ತೂ... ಈ ದರೀದ್ರ ಮೀನ್ನ ಯಾರೂ ತಿನ್ನಲ್ಲ ಕಂಡ್ಯ ಅಂದ. ನಮ್ ಚಿಕ್ಕಪ್ಪ ಹೇಸಿಗೆ ಇಲ್ಲದೆ, ಈ ಮೀನ್ನ ಯಾರ್ ತಿಂತಾರ್ಲ ಅಂದ್ರು. ನನಗೆ ಈ ಭಾರಿ ಗಾತ್ರದ ಮೀನ್ನ ಯಾಕ್ ಯಾರೂ ತಿನ್ನಲ್ಲ, ಎಂದು ಕುತೂಹಲ ಹೆಚ್ಚಾಯಿತು. ಅವ್ನು ಬರಿ ಕೈನಲ್ಲಿ ಹೋಗೋದ್ಕಿಂತ ಇದುನ್ನಾದ್ರು ತೆಕ್ಕೊಂಡ್ ಹೋಗೋಣ, ನಾವಂತು ತಿನ್ನಲ್ಲ, ಬೇರೆ ಯಾರಾದ್ರು ತಿಂತಾರಾ ನೋಡೋಣ, ಎಂದು. ಆ ಭಾರಿ ಗಾತ್ರದ ಮೀನ್ನ ತನ್ನ ಚೀಲದಲ್ಲಿ ಹಾಕ್ಕೋಂಡು, ಎಲ್ಲಾ ಗಾಣಗಳನ್ನು ಮಡಚಿಕೊಂಡು ಊರಿನ ಕಡೆ ಹೊರಟ. ನಾವೂನು ತುಂಬಾ ಹೊತ್ತಾಗಿದ್ದರಿಂದ ಸ್ವಲ್ಪ ಮೀನುಗಳೊಂದಿಗೆ ಅವುನ ಜೊತೆನೇ ಹೊರಟೆವು.

ಊರ್ಲಿ, ಆ ಆನೆಗಾತ್ರದ ಮೀನನ್ನ ನೋಡಕ್ಕೆ ಅರ್ಧ ಊರೇ ಬಂದಿತ್ತು. ಆದ್ರೇ, ಯಾರೂ ತೆಕೊಳ್ಳವ್ರು ಗತಿ ಇಲ್ಲ. ಕುಮಾರಣ್ಣ ಕೇವಲ ಕೇಜಿಗೆ ಇಪ್ಪತ್ತು ರೂಪಾಯಿಗೆ ಕೊಡ್ತಿನಿ, ತೆಕೊಳ್ಳಿ, ಅಂತಾನೆ, ಆದ್ರೇ ಯಾರೂ ತಕ್ಕೋತ್ತಿಲ್ಲ. ಜನ್ರು, ತೂ... ಅದನ್ನೂ ತಿಂತಾರ ಬೇಡ ಅಂದ್ರು. ಪಾಪ ಕುಮಾರಣ್ಣ, ಅವ್ನೆ ಆ ಮೀನ್ನ ಮಚ್ಚಿನಿಂದ ಕೊಚ್ಚಿ, ಅದ್ರ ಉರುಪೆನೆಲ್ಲ ತೆಗ್ದು ಅದನ್ನ ತುಂಡು ತುಂಡುಗಳನ್ನಾಗಿ ಮಾಡಿದ.

ಕೆಲವು ಪಡ್ಡೆ ಹುಡುಗ್ರು, ಲೋ... ಆದದ್ ಆಗ್ಲೀ, ತಕ್ಕೋಳ್ಳ ಇವತ್ತು ಎರಡು ಕ್ವಾಟ್ರು ತರ್ಸಿ, ಅದ್ರ ಮತ್ನಲ್ಲಿ ತಿಂದ್ ಬಿಡೋಣ, ಅಂತ ಎರಡ್ ಕೇಜಿ ತಕ್ಕೋಂಡ್ರು ಅಷ್ಟೇ... ಆದ್ರೇ ಇನ್ಯಾರು ತೆಕ್ಕೋಳ್ಳಿಲ್ಲ. ಕೊನೆಗೆ ಕಾದು ಕಾದು ಸಾಕಾಗಿ ಕುಮ್ಮಾರಣ್ಣ, ಸರಿ ಹಾಗಾದ್ರೇ, ಯಾರಿಗ್ ಬೇಕು ತೆಕ್ಕೋಳ್ ಡ್ರಿ, ಫ್ರಿಯಾಗ್ ಕೊಟ್ ಬಿಡ್ತಿನಿ ಅಂದ. ಜನ್ರು ನೀನು ಫ್ರೀಯಾಗಿ ಕೊಟ್ರು ಬೇಡ ಅಂತ ಹೊಂಟೋದ್ರು. ಕೊನೆಗೆ ಬೇಜಾರಾಗಿ ಉಳಿದಿರೊದೆಲ್ಲ ನಮ್ಮೂರ ನಾಯಿಗಳಿಗೆ ಹಾಕ್ಬಿಟ್ಟ. ಅವು ಒಂದಕ್ಕೋಂದು ಬಾಯ್ನಲ್ಲಿ ಕಚ್ಕೊಂಡು, ಎಳೆದಾಡ್ತ ಜಗಳ ಆಡ್ಕೊಂಡು, ಊರ್ ಬಿಟ್ಟು, ನಿರ್ಜನ ಪ್ರದೇಶಕ್ಕೆ ಓಡೋದ್ವು. ಅವುಗಳನ್ನ ಅಟ್ಟಾಡಿಸಿಕೊಂಡು, ನಮ್ಮೂರ್ ಕಾಗೆಗಳು ಓಡೋದವು. ಅಂದು ನಾಯಿ-ಕಾಗೆಗಳಿಗೆಹಬ್ಬವೋ...ಹಬ್ಬ.

ನಂತ್ರ ನಾನು ನಮ್ಮ ಚಿಕ್ಕಪ್ಪನ್ನಾ ಅಲ್ಲಾ ಯಾಕ್ ಆ ಆನೆ ಮೀನನ್ನ ಫ್ರೀಯಾಗ್ ಕೊಟ್ರು ಜನ ತೆಕ್ಕೋಳಲ್ಲ ಎಂದೆ. ಅದ್ಕೆ ಅವ್ರು, ಲೋ... ಆ ಮೀನ್ನ ಯಾರೂ ತಿನ್ನಲ್ಲ. ಹೇಸಿಗೆ ಪಟ್ಕೊಂತಾರ, ಏಕಂದ್ರೆ ಅದ್ರ ಚರ್ಮ ದಪ್ಪ ಮತ್ತೆ ಮಂದ. ಅದನ್ನ ತಿಂದ್ರೆ ಬೆಂಡ್ ತಿಂದಂಗ ಸಪ್ ಸಪ್ಪೆ ಆಗ್ತದ. ಆ ಮೀನು ದೊಡ್ಡ ಮೀನಾಗಿ ರೋದ್ರಿಂದ, ನೀರ್ನಲ್ಲಿರೋ ಸಣ್ಣ ಸಣ್ಣ ಕಪ್ಪೆಗಳು, ನೀರ್ನಾವು, ನೀರ್ನಾಯಿ, ಮತ್ತೇ...ನೀರ್ನಲ್ಲಿ ಸತ್ತು ಕೊಳೆತಿರೊ ಪ್ರಾಣಿಗಳು, ಪಕ್ಷಿಗಳು, ಮನುಷ್ಯರ ಹೆಣಾನು ತಿಂತಾವೋ... ಅದ್ಕೆ ಅದನ್ನ ಯಾರೂ ತಿನ್ನಲ್ಲ. ಅದನ್ನ ತಿಂದ್ರೂ ಮನುಷ್ಯನ ವಾಸ್ನೆ ಬರ್ತೈತಂತೆ. ಅದನ್ನ ಕತ್ರಿಸಿ ತುಂದ್ ಮಾಡ್ದಾಗ, ನೀನೆ ನೋಡ್ದಲ್ಲ, ಕೋಳಿ ಕೂಯ್ದಾಗ ರಕ್ತ ಸುರಿಯುತ್ತಲ್ಲ ಹಾಗ್ ಸುರಿತ್ತದ. ಅದನ್ನ ಹ್ಯಂಗ್ಲ ತಿನ್ನೋದು, ಅದ್ಕೇ ಅದನ್ನ ಯಾರೂ ಪುಕ್ಸಟ್ಟೇ ಕೊಟ್ರು ತಿನ್ನಲ್ಲ ಎಂದರು.





- ಶಿವಕುಮಾರ್ .ಬಿ

ಶಿಕ್ಷಕರು, ಎಸ್.ಆರ್.ವಿ.ಕೆ ಶಾಲೆ

ಆರೋಗ್ಯಕರ ಮಣ್ಣು ಬೆಳೆಯುವುದು



ಭಾರೀ ಹಣಗಳಿಸಬಹುದಾದ "Software" ಕೆಲಸಗಳು ಎಷ್ಟೋ ಇದ್ದರೂ ಸಹ ಹೊಟ್ಟೆಗೆ Software ಊಟ ಒಲ್ಲದು. ಅದಕ್ಕಾಗಿಯೇ ವ್ಯವಸಾಯದ ಅವಶ್ಯಕತೆಯ ಅರಿವಾಗುತ್ತಿದ್ದಂತೆಯೇ ಬರೀ ಹಳ್ಳಿಗಳಲ್ಲಿ ಮಾತ್ರವಲ್ಲದೆ ಈಗ ನಗರಗಳಲ್ಲಿಯೂ "ಮಳಿಗೆ ತೋಟಗಾರಿಗಳಂತಹ" ನಗರ ವ್ಯವಸಾಯ ಅಭ್ಯಾಸಗಳು ತಲೆ ಎತ್ತುತ್ತಿವೆ. ನಗರ ವ್ಯವಸಾಯವು ಪಟ್ಟಣದ ನಿವಾಸಿಗಳಿಗೆ ತಾಜಾ ತರಕಾರಿಗಳನ್ನು ಸವಿಯಲು ಸಹಾಯ ಮಾಡುತ್ತವೆ. ಅಷ್ಟೇ ಅಲ್ಲದೆ ದೇಹಕ್ಕೆ ವ್ಯಾಯಾಮದ ಜೊತೆಗೆ ಅಕ್ಕ ಪಕ್ಕದವರಲ್ಲಿನ ಸ್ನೇಹ ಹೆಚ್ಚುವಂತೆ ಮಾಡುತ್ತದೆ. ಆದರೆ ಅದರಲ್ಲೊಂದು ಕಹಿ ಸಂಗತಿ ಏನೆಂದರೆ ಹಲವಾರು ಪಟ್ಟಣದ ಮಣ್ಣಿನಲ್ಲಿ ವಿಷಕಾರಿ ಸೀಸದ ಪ್ರಮಾಣ ಹೆಚ್ಚಿದೆ. ಈ ಸೀಸವು ನಮ್ಮ ಮೆದುಳಿನ ಹಾಗೂ ನರಗಳ ಮೇಲೆ ಪರಿಣಾಮ ಬೀರುತ್ತವೆ. ಅಲ್ಲದೆ ಮಕ್ಕಳಲ್ಲಿ ಹೆಚ್ಚಾಗಿ ಕಂಡುಬರುತ್ತದೆ. ಹಾಗೆಯೇ ಸಿಹಿ ಸುದ್ದಿ ಎಂದರೆ ವಿಜ್ಞಾನಿಗಳು ಆರೋಗ್ಯಕರ ಮಣ್ಣನ್ನು ಬೆಳೆಯುವ ವಿಧಾನ ಒಂದನ್ನು ಕಂಡುಹಿಡಿದಿದ್ದಾರೆ.

ಹೌದು ಮಣ್ಣನ್ನು ಬೆಳೆಯಬಹುದು!



ಸಾರಾ ಪರ್ಲ್ ಎಜೆಂಡೊರ್ಫ್ (Sara Perl Egendorf) ಮತ್ತು ಅವರ ಸಹಚರರು ಈ ಸಂಶೋದನೆಗಾಗಿ ನ್ಯೂಯಾರ್ಕ್ ನ ಕೆಲವೆಡೆ ಶ್ರಮ ಪಟ್ಟಿದ್ದಾರೆ. ಇವರು City University of New York ನ Brooklyn College ನಲ್ಲಿ ಮಣ್ಣಿನ ವಿಜ್ಞಾನಿಗಳು. ಮೊದಲಿಗೆ ಅವರು ಕಟ್ಟಡಗಳಿಗಾಗಿ ತೋಡಿದ್ದ ಹಳ್ಳಗಳಲ್ಲಿನ ಮಣ್ಣಿನ ಪದರಗಳನ್ನು ಸಂಗ್ರಹಿಸಿ ವೀಕ್ಷಿಸಿ ನಂತರ ಅವುಗಳಲ್ಲಿ ಕಡಿಮೆ ಇದ್ದ ಲವಣಗಳನ್ನು ಕಂಡುಕೊಂಡರು. ನಂತರ ಅವುಗಳನ್ನು ಮಣ್ಣಿಗೆ ಸೇರಿಸಿದರು, ಪರಿಣಾಮ ಗಿಡಗಳು ಕೊಳೆತು ಹೋದವು. ಕಾರಣ, ಮಣ್ಣು ಮತ್ತು ಖನಿಜ-ಲವಣಗಳು ಸಮತೋಲನದಲ್ಲಿರಲಿಲ್ಲ. ಅವುಗಳನ್ನು ಸರಿದೂಗಿಸಲು ವಿವಿಧ ಅನುಪಾತಗಳಲ್ಲಿ ಬೆರೆಸಿ ವಿಂಗಡಿಸಿದ್ದಾರೆ.

ಈಗ ಅವುಗಳಲ್ಲಿ ಪರೀಕ್ಷಾರ್ಥವಾಗಿ ಈರುಳ್ಳಿ, ಮೆಣಸು, ಟೊಮೇಟೊ ಮತ್ತು ತುಳಸಿ ಗಿಡಗಳನ್ನು ಬೆಳೆಸಿದರು. ಪರಿಣಾಮ 50:50 ಅನುಪಾತವಿದ್ದ ಮಣ್ಣಿನ ಮಡಿಯಲ್ಲಿ ಹೆಚ್ಚಾದ ಇಳುವರಿ ಬಂತು. ಅದರಲ್ಲಿನ ಸೀಸದ ಪ್ರಮಾಣವು ಅಷ್ಟೇನು ಹೆಚ್ಚಿರಲಿಲ್ಲ, ತಿನ್ನಲು ಯೋಗ್ಯವಾಗಿಯೇ ಇತ್ತು.

ಮಣ್ಣಿಗೆ ಸೀಸ ಸೇರುವ ವಿಧಗಳು ಹೇಗೆ?, ಮಿಶ್ರಗೊಬ್ಬರದ ಜೊತೆಗೆ: ಹೌದು ಕೆಲ ಪ್ರಮಾಣದಲ್ಲಿ ಸೀಸವು ಮಿಶ್ರಗೊಬ್ಬರದ ಜೊತೆಗೆ ಬಂದು ಸೇರುತ್ತವೆ. ಉದಾಹರಣೆಗೆ ನಮ್ಮ ತೋಟದ ಮಣ್ಣಿನ ಜೊತೆಗೆ ಮಿಶ್ರಗೊಬ್ಬರವನ್ನು ಸೇರಿಸುವಾಗ ಸುತ್ತಮುತ್ತಲಿನ ಪ್ರದೇಶದ ಧೂಳಿನಲ್ಲಿ ಬಂದು ಸೇರುತ್ತದೆ, ಈ ಧೂಳಿನಲ್ಲಿನ ಸೀಸವು ಮಿಶ್ರಗೊಬ್ಬರದ ಸೀಸಕ್ಕಿಂತ ಹತ್ತು ಪಟ್ಟು ಹೆಚ್ಚು. ಸೀಸಗಳಲ್ಲಿ ಹಲವು ವಿಧಗಳಿವೆ ಅವು ಬೇರೆ ಬೇರೆ ಪ್ರದೇಶಗಳಲ್ಲಿ ಬೇರೆ ಬೇರೆ ಪ್ರಮಾಣ ಮತ್ತು ವಿಧಗಳಲ್ಲಿರುತ್ತವೆ. ಈ ತರಹದ ಸೀಸಗಳನ್ನು ಗಿಡಗಳು ಹೆಚ್ಚಾಗಿ ಉಪಯೋಗಿಸದ ಕಾರಣ ಇವು ಅಷ್ಟೇನೂ ಹಾನಿಯಲ್ಲ.

ಈ ಸೀಸಗಳು ಹೇಗೆ ಮಣ್ಣಿನೊಳಗೆ ಸೇರಿಕೊಂಡವು? ಎಂಬ ಪ್ರಶ್ನೆ ನಿಮ್ಮನ್ನು ಕಾಡಬಹುದು. ಉತ್ತರ ಇಲ್ಲಿದೆ. ಒಂದು, ಮನೆಯ ಹಳೇ ಗೋಡೆಗಳಿಗೆ ಬಳಿದ ಬಣ್ಣಗಳಿಂದ. ಎರಡು, ಸೀಸಯುಕ್ತ ಇಂಧನಾಧಾರಿತ ವಾಹನಗಳ (1970ರ ವರೆಗಿನ ವಾಹನಗಳು) ಹೊಗೆಯಿಂದ. ಸಸ್ಯಗಳು ಈ ತರದ ಸೀಸವನ್ನು ಬಣ್ಣಗಳ ಸೀಸಕ್ಕಿಂತ ಹೆಚ್ಚು ಪ್ರಭಲವಾಗಿ ಉಪಯೋಗಿಸುತ್ತವೆ.

ಹಾಗಾದರೆ, ಈ ಸೀಸದ ಪರಿಮಾಣ ಕಡಿಮೆಯೇ ಆಗುವುದಿಲ್ಲವೇ?, ಸ್ವಾಭಾವಿಕವಾಗಿಯೇ ಸೀಸದ ಪರಿಮಾಣವನ್ನು ಕ್ಷೀಣಿಸುತ್ತದೆ. ಉದಾಹರಣೆಗೆ ಮಣ್ಣಿನಲ್ಲಿ ಹೆಚ್ಚಿನ ಇಂಗಾಲದ ಸಂಯುಕ್ತಗಳಿದ್ದಲ್ಲಿ ಸೀಸದ ಪರಿಣಾಮವೂ ಕಡಿಮೆಯಾಗುತ್ತದೆ. ಹೆಚ್ಚು ಆಮ್ಲೀಯ ಮಣ್ಣಲ್ಲೂ ಸಹ ಸೀಸದ ತೊಂದರೆ ಕಡಿಮೆ ಇರುತ್ತದೆ.

ಇದರಿಂದಾಗಿ ಈ ಪ್ರಯೋಗವು ಮಿಶ್ರಗೊಬ್ಬರದಲ್ಲಿ ಸೇರಿಸುವ ಇಂಗಾಲದ ಸಂಯುಕ್ತಗಳು ಮತ್ತು ಆಮ್ಲಗಳಿಂದ ನಗರ ಮಣ್ಣನ್ನು ಸೀಸಮುಕ್ತ ಮಣ್ಣಾಗಿಸಿ ಆರೋಗ್ಯಕರವಾಗಿಸಬಹುದು. ಹೀಗೆ ಇಲ್ಲಿನ ಮಣ್ಣನ್ನು ಉತ್ತಮಗೊಳಿಸಲು ಬೇರೆಯ ನಿಯಮಗಳ ಅವಸರವಿಲ್ಲ. ಇಲ್ಲಿಯೇ ದೊರಕುವ ಕೆಲವು ಜಾಗೃತ ಕ್ರಮಗಳಿಂದ ಹಾಗೂ ಸೀಸಗಳಂತಹ ಹಾನಿಕರ ಲೋಹಗಳ ಬಗೆಗಿನ ತಿಳುವಳಿಕೆ ಬೇಕು.

- ಜೈಕುಮಾರ್ .ಆರ್





ಅದೇನದು ಇಯರ್ ಫೋನೋ? ಹೆಡ್ ಫೋನೋ?
ಅದನ್ನು ನಾಡಿನಲ್ಲಿಯೇ ಬಿಸಾಕಿ ಹೋಗಿ.



ಚಾರಣ ಒಂದು ಸಾಹಸ ಕ್ರೀಡೆಯಾಗಿದೆ. ದೈನಂದಿನ ಏಕತಾನತೆಯ ಬದುಕಿನಿಂದ ಸ್ವಲ್ಪ ಸಮಯ ಹೊರಬಂದು ಕಾಡಿನ ನೆಲ-ಜಲಗಳ ನಡುವೆ, ಹೊಸ ವಿಷಯಗಳನ್ನು ಅರಿಯುತ್ತಾ, ತನ್ನನ್ನು ಸಂಪೂರ್ಣವಾಗಿ ತೊಡಗಿಸಿಕೊಂಡು ರೋಮಾಂಚನಗೊಳ್ಳಲು ಇದಕ್ಕಿಂತ ಅರ್ಥಪೂರ್ಣ ಹಾಗೂ ಸರಳ ವಿಧಾನ ಬೇರೆಯಿಲ್ಲ. ದಟ್ಟವಾದ ಕಾಡುಗಳು, ಪರ್ವತ ತಪ್ಪಲುಗಳು, ಕಡಿದಾದ ಏರುಗಳು, ನದಿ-ತೊರೆಗಳ ಇಕ್ಕೆಲದ ಜಾಡುಗಳು, ಅನಂತವಾಗಿ ಹರವಿಕೊಂಡಿರುವ ಹುಲ್ಲುಗಾವಲುಗಳು, ಜಲಪಾತದ ಕಂದರಗಳು, ಪ್ರಪಾತದ ಅಂಚುಗಳು, ಸಾಹಸಿಗಳನ್ನು ಕೆಣಕುವ ಅಪಾಯಕಾರಿ ಹರಿವಿನ ನದಿ ಪಾತ್ರಗಳು, ಅಜ್ಞಾತವಾದ ಸುರಂಗಗಳು, ವಿಸ್ಮಯಕಾರಿ ನಿಸರ್ಗ ನಿರ್ಮಿತ ನಿಗೂಢಗಳು, ಸೂರ್ಯನ ಬೆಳಕೇ ಬೀಳದಂಥ ಆಳಕಣಿವೆಗಳು, ಹೀಗೆ ಹೇಳುತ್ತಾ ಹೋದರೆ ಮುಗಿಯದೇ ಇರುವ ಈ ಪೃಥ್ವಿಯ ಕೌತುಕಗಳು ಎಂದಿನಿಂದಲೂ ಸಾಹಸಿಗಳನ್ನು, ನಿಸರ್ಗ ಪ್ರಿಯರನ್ನು ಅನ್ವೇಷಣೆ ಮಾಡಲು ಪ್ರೇರೇಪಿಸುತ್ತಲೇ ಇವೆ.

ಚಾರಣದಲ್ಲಿ ಸಂದರ್ಶಿಸುವ ಸ್ಥಳದ ವಿವರ, ಮಾರ್ಗದರ್ಶಕರ ಜ್ಞಾನ, ಹೊಂದಿರುವ ಮಾಹಿತಿ, ಚಾರಣ ಪ್ರಾರಂಭವಾದಲ್ಲಿಂದ ಗಮ್ಯ ಸ್ಥಾನದವರೆಗೂ ಇರುವ ದೂರ, ನಡೆಯಲಿರುವ ಹಾದಿಯ ಸ್ವರೂಪ, ಹೊರಡುವ ಸಮಯ, ಹಾದಿ ಕ್ರಮಿಸಲು ತಗಲುವ ಸಮಯ, ಭಾಗವಹಿಸುವವರ ವಯಸ್ಸು, ಅವರ ದೈಹಿಕ ಸಾಮರ್ಥ್ಯ, ಆರೋಗ್ಯ ಸ್ಥಿತಿ, ಆ ದಿನದ ವಾತಾವರಣ ಹಾಗೂ ಹವಾಮಾನ, ಉಪಹಾರ ಮತ್ತು ಊಟ, ದಾರಿಯ ಮಧ್ಯೆ ಆಯಾಸವಾದಾಗ ಬೇಕಾಗುವ ಲಘುವಾದ ಪೂರಕ ಆಹಾರ, ಹಣ್ಣು, ಚಾಕಲೇಟುಗಳು, ಶುದ್ಧವಾದ ನೀರು ಇನ್ನಿತರೆ ವಿಚಾರಗಳು ಬಹಳ ಮುಖ್ಯವಾಗಿರುತ್ತವೆ.




ಕಡಿದಾದ ಕಲ್ಲಿನ ಏರನ್ನು ಹಗ್ಗದ ಸಹಾಯದಿಂದ ಹತ್ತುವುದಿದ್ದಲ್ಲಿ, ಪರಿಣಿತರ ಸಲಹೆ, ಮಾರ್ಗದರ್ಶನ ಅತ್ಯಗತ್ಯ. ಈ ಸಾಹಸಕ್ಕೆ ಅಗತ್ಯವಾದ ಸಲಕರಣೆಗಳು, ವಿಶೇಷ ಬೂಟುಗಳು, ಹೆಲ್ಮೆಟ್, ಬಲವಾದ ಹಗ್ಗ, ದೈಹಿಕ ಸಾಮರ್ಥ್ಯಗಳಲ್ಲದೇ ಸೂಕ್ತ ತರಬೇತಿಯೂ ಅವಶ್ಯವಾಗಿದೆ. ಚಾರಣದ ಸಮಯದಲ್ಲಿ ಬೇಕಾಗಿರುವ ಮೂಲಭೂತ ಸಲಕರಣೆಗಳು, ಅಗತ್ಯವಿದ್ದಲ್ಲಿ ಟೊಪ್ಪಿ, ಸ್ವೆಟರ್, ರೈನ್ ಕೋಟ್, ಸಾಕ್ಸ್ ಮತ್ತು ಬೂಟ್, ಜಿಗಣೆಯಿರುವ ಸ್ಥಳವಾದಲ್ಲಿ ಬೇವಿನೆಣ್ಣೆ ಮತ್ತು ನಶ್ಯ ಪುಡಿಯ ಮಿಶ್ರಣ, ಇಳಿಜಾರಲ್ಲಿ ಮತ್ತು ಕಡಿದಾದ ಏರಿನಲ್ಲಿ ಇಳಿಯಲು ಅಥವಾ ಯಾರನ್ನಾದರೂ ಮೇಲಕ್ಕೆ ಎಳೆದುಕೊಳ್ಳಲು ಸಹಾಯಕವಾಗುವ ಹಗ್ಗ, ಸಕ್ಕರೆ-ಉಪ್ಪು, ನಿಂಬೆಹಣ್ಣಿನ ರಸದ ಹದವಾದ ಮಿಶ್ರಣದ ಕುಡಿಯುವ ನೀರು ದೇಹದಿಂದ ಬೆವರಿನ ರೂಪದಲ್ಲಿ ಹೊರಹೋಗುವ ಲವಣಾಂಶದ ಕೊರತೆಯನ್ನು ಸರಿದೂಗಿಸುತ್ತದೆ. ರಾತ್ರಿ ಕಾಡಿನಲ್ಲಿ ತಂಗುವುದಿದ್ದಲ್ಲಿ, ಟಾರ್ಚ್, ಸ್ಲೀಪಿಂಗ್ ಬ್ಯಾಗ್, ವಾಟರ್ ಪ್ರೂಫ್ ಟೆಂಟ್ ಅಗತ್ಯವಾಗಿರುತ್ತದೆ. ಇವೆಲ್ಲ ಏನೇ ಇದ್ದರೂ ನಿಮ್ಮ ಲಗೇಜ್ ಕಡಿಮೆಇದ್ದಷ್ಟೂ ನಿಮ್ಮ ಚಾರಣ ಸರಳ, ಸುಲಲಿತ, ಸರಾಗ ಹಾಗೂ ಸಂತಸಮಯವಾಗಿರುತ್ತದೆ. ನಮ್ಮ ಅನುಕೂಲಕ್ಕೆ ಮಾಡಿಕೊಂಡ ವ್ಯವಸ್ಥೆಗಳೇ ಹಲವೊಮ್ಮೆ ಅನಾನುಕೂಲಕ್ಕೆ ಕಾರಣವಾಗುತ್ತವೆ.



ಚಾರಣವನ್ನು ಬೆಳಿಗ್ಗೆ 6-7 ಗಂಟೆಗೇ ಪ್ರಾರಂಭ ಮಾಡುವುದು ಒಳ್ಳೆಯದು. ಚುಮುಚುಮು ಬೆಳಕಿನಲ್ಲಿ ನಿಮ್ಮಜೀವನದ ಅವಿಸ್ಮರಣೀಯ ಕ್ಷಣಗಳು ಸಂಭವಿಸುತ್ತವೆ. ಬೆಳಗಿನ ಉಪಹಾರ ಬಲವಾಗಿರಬೇಕು. ಮಧ್ಯಾಹ್ನಕ್ಕೆ ಉಪಹಾರ ಅಥವಾ ಊಟವನ್ನು ಪುಟ್ಟ ಪೊಟ್ಟಣಗಳಲ್ಲಿ ಅವರವರೇ ಹೊತ್ತೊಯ್ಯುವಂತೆ ಬೆಳಗಿನ ಉಪಹಾರದ ನಂತರ ವಿತರಿಸುವುದು ಒಳ್ಳೆಯದು. ಅವರಿಗೆ ಅಗತ್ಯವಾದಾಗ, ಹಸಿವಾದಾಗ ತಿನ್ನಲು, ಆಯಾಸ ಪರಿಹರಿಸಿಕೊಳ್ಳಲು ಬೇಕಾಗುತ್ತದೆ. ಕಿತ್ತಳೆ ಹಣ್ಣು, ಬಾಳೆ ಹಣ್ಣು, ಸೌತೆಕಾಯಿ, ಒಣ ಹಣ್ಣುಗಳು ಹಾದಿಯಲ್ಲಿ ನಡೆಯುತ್ತಾ ತಿನ್ನಲು ಒಳ್ಳೆಯದು. ಕುರುಕಲು ತಿಂಡಿಗಳು, ಕರಿದ ಪದಾರ್ಥಗಳು ಮತ್ತು ಕಾರ್ಬೋನೇಟೆಡ್ ತಂಪು ಪಾನೀಯಗಳು ಬೇಡವೇ ಬೇಡ.


ಉತ್ತಮ ಗುಣಮಟ್ಟದ, ಬಳಸಲು ಸರಳವಾಗಿರುವ, ಆರಾಮದಾಯಕವಾಗಿರುವ ಬೂಟುಗಳನ್ನು ಅಂಗಡಿಗಳಲ್ಲಿ ಮಧ್ಯಾಹ್ನದ ನಂತರವೇ ಆಯ್ಕೆ ಮಾಡಿಕೊಳ್ಳಿ? ಆಗ ನಿಮ್ಮ ಪಾದದ ಅಳತೆಗೆ ಸರಿಯಾದ ಆಯ್ಕೆ ಮಾಡಬಹುದು. ಹತ್ತಿಯಿಂದ ಮಾಡಿದ ಸಾಕ್ಸ್‌ಗಳನ್ನೇ ಬಳಸಿ, ಅವು ಹವಾನಿಯಂತ್ರಣ ಮಾಡುತ್ತವೆ. ಉಸಿರಾಟದ ವ್ಯಾಯಾಮವನ್ನು ದೈನಂದಿನ ಅಭ್ಯಾಸವನ್ನಾಗಿ ಮಾಡಿಕೊಂಡಿರಿ, ಚಾರಣದ ಸಮಯದಲ್ಲಿ ಎತ್ತರವನ್ನು ಏರುವಾಗ ಆಯಾಸವಾಗದಂತೆ ಸಹಕರಿಸುತ್ತದೆ. ಒಂದು ಜೊತೆ ಹಗುರವಾದ ಉಡುಪನ್ನು ಇಟ್ಟುಕೊಂಡಿರುವುದು ಒಳ್ಳೆಯದು. ಬೆನ್ನಿಗೆ ಹಾಕಿಕೊಳ್ಳಲು, ಸುಲಭವಾಗಿ ತೆಗೆಯಲು, ಸರಾಗವಾಗಿ ತೆರೆಯಲು ಆಗುವಂಥ ಬ್ಯಾಗನ್ನೇ ಇಟ್ಟುಕೊಳ್ಳಿ. ನಡೆಯಲು ಕೈಲೊಂದು ಕೋಲಿದ್ದರೆ ನಡಿಗೆ ಸುಲಲಿತವಾಗಿರುತ್ತದೆ. ಆಧಾರವಾಗಿರುವುದರೊಂದಿಗೆ ಎದುರಾಗುವ ಪೊದೆಯನ್ನು, ಮುಳ್ಳುಕಂಟಿಯನ್ನು ಪಕ್ಕಕ್ಕೆ ಹೊರಳಿಸಲು ಹಾಗೇ ನಡಿಗೆಯ ದಾರಿಯನ್ನು ಪರೀಕ್ಷಿಸಲು ಸಹಕಾರಿಯಾಗುತ್ತದೆ. ಆಗಾಗ ಲವಣಯುಕ್ತ ನೀರನ್ನು ಗುಟುಕರಿಸುವುದರ ಜೊತೆಗೆ ದೇಹದ ಇತರೆ ಅಗತ್ಯಗಳಿಗೆ ಸ್ಪಂದಿಸುವುದು ತೀರಾ ಅತ್ಯಗತ್ಯ.



ಚಾರಣ ಪ್ರದೇಶದ ನಕಾಶೆಯನ್ನು ಒಮ್ಮೆ ಅವಲೋಕಿಸುವುದು ಸೂಕ್ತ. ಮಾರ್ಗದರ್ಶಕ, ಆಯೋಜಕರಿಬ್ಬರೂ ಕುಳಿತು, ನಕಾಶೆಯನ್ನು ಪರಿಶೀಲಿಸಿ ಕೆಲವು ಮುಖ್ಯ ತೀರ್ಮಾನಗಳನ್ನು ತೆಗೆದು ಕೊಳ್ಳಬೇಕು. ಹೊರಡುವ ಸ್ಥಳ, ಸಮಯ, ಸಾಗುವ ಹಾದಿ, ನೀರಿನ ಮೂಲಗಳು, ಮಧ್ಯಾಹ್ನದ ವಿಶ್ರಾಮದ ಸ್ಥಳ, ಹತ್ತಿರದ ವಾಹನ ಮಾರ್ಗ, ತಲುಪುವ ಸ್ಥಳ, ಸಮಯ, ಇವೆಲ್ಲವನ್ನೂ ಚಾರಣದ ಪ್ರಾರಂಭದ ಸ್ವಪರಿಚಯ ಸಂದರ್ಭದಲ್ಲಿಯೇ ವಿವರವಾಗಿ ಭಾಗವಹಿಸುವ ಎಲ್ಲರಿಗೂ ಮನನ ಮಾಡಿಕೊಡಬೇಕು. ಗೈಡ್ ಹಾಗೂ ಟೀಂ ಮೇನೇಜರ್ ಬಳಿ ವಿಷಲ್‌ಗಳಿರಲೇಬೇಕು. ದಾರಿ ತಪ್ಪಿದಾಗ, ಎಲ್ಲರನ್ನೂ ಒಂದೆಡೆ ಸೇರಿಸಬೇಕಾದಾಗ, ಈ ವಿಷಲ್ ತುಂಬಾ ಉಪಯೋಗಕ್ಕೆ ಬರುತ್ತದೆ. ಗವಿ, ಸುರಂಗ ಪ್ರವೇಶಿಸುವುದಿದ್ದಲ್ಲಿ, ಸಂಜೆ ತಡವಾಗುವ ಸಂಭವವಿದ್ದಲ್ಲಿ ತಲೆಗೆ ಕಟ್ಟುವ ಎರಡು ಟಾರ್ಚ್ ಬೇಕಾಗುತ್ತದೆ. ಅಲ್ಲದೇ ಅಗತ್ಯ ಸಂದರ್ಭಗಳಲ್ಲಿ ಬಳಸಲು ಉದ್ದವಾದ ಎರಡು ಕತ್ತಿಗಳು ಜವಾಬ್ದಾರಿಯುತರ ಬಳಿಯಲ್ಲಿರುವುದು ಒಳಿತು. ತಂಡದ ಸದಸ್ಯರು ಬಳಸಿದ ನಂತರ ಉಳಿದ ಕವರ್‌ಗಳು, ಇನ್ನಿತರೆ ತ್ಯಾಜ್ಯಗಳನ್ನು ಒಂದು ಚೀಲದಲ್ಲಿ ಸಂಗ್ರಹಿಸಲು ವ್ಯವಸ್ಥೆಯಿರಲೇಬೇಕು. ಕಣ್ಣಿಗೆ ರಾಚುವಂಥ ಬಣ್ಣದ ಉಡುಪುಗಳನ್ನು ಬಳಸಲೇಬೇಡಿ.

ಕಾಡಿನಲ್ಲಿ ಕಿವಿಗೆ ಯಿಯರ್ ಫೋನುಗಳನ್ನು ಹಾಕಿಕೊಂಡು ಸಿನಿಮಾ ಹಾಡುಗಳನ್ನು ಕೇಳಬೇಡಿ. ಜಗತ್ತಿನ ಅದ್ಭುತ ಸಂಗೀತ ಕಾಡಿನ ಹಾಡನ್ನು ಕಳೆದುಕೊಳ್ಳುತೀರಿ. ದುಂಭಿಗಳ ಝೇಂಕಾರ, ನೀರಿನ ಜುಳುಜುಳು ನಿನಾದ, ಕಾಡಿನ ಅರ್ಥಪೂರ್ಣ ಮೌನ, ಸುಳಿದಾಡುವ ತಂಗಾಳಿ, ಆಳೆತ್ತರದ ಹುಲ್ಲಿನ ತೊನೆದಾಟ, ಪಕ್ಷಿಗಳ ಕಲರವ, ಪ್ರಾಣಿಗಳ ಹೂಂಕಾರ, ಸರೀಸೃಪಗಳ ಸರಿದಾಟದ ಸರಪರ ಸದ್ದು, ಸದ್ದಿಲ್ಲದೆ ಹರಿದಾಡುವ ಇರುವೆ-ಗೆದ್ದಲುಗಳು, ನೀವು ಕಾಡಿಗೆ ಹೋಗಿ ಅಲೆದಾಡಿ ಬಂದದ್ದಕ್ಕೆ ಅರ್ಥ ಬರಬೇಕೆಂದರೆ ಇವೆಲ್ಲವನ್ನೂ ನೀವು ಗಮನಿಸಬೇಕು. ವಿನಾಕಾರಣ ಕೂಗುವುದು, ಗಿಡಗಳನ್ನು ಚಿವುಟುವುದು, ಮರಗಳನ್ನು ಗಾಯಗೊಳಿಸುವುದು ಮಾಡಲೇಬೇಡಿ. ಕಾಡುಪ್ರಾಣಿಗಳು ಎದುರಾದರೆ ಅವುಗಳನ್ನು ಕೆಣಕದೇ ದೂರದಿಂದಲೇ ಎಚ್ಚರಿಕೆಯಿಂದ ಗಮನಿಸಿ. ಪ್ರಾಣಿ, ಪಕ್ಷಿ, ಕೀಟಗಳನ್ನು ದೂರದಿಂದಲೇ ಗಮನಿಸಿ, ಹಿಡಿಯಲು ಹೋಗಲೇಬೇಡಿ. ನಿಮ್ಮಿಂದ ಅವಕ್ಕೆ ಅಥವಾ ಅವುಗಳಿಂದ ನಿಮಗೆ ಅಪಾಯವಾಗಬಹುದು. ತೊರೆಗಳ ಪಾತ್ರದಿಂದ ಕಲ್ಲುಗಳನ್ನು ಸಂಗ್ರಹಿಸಬೇಡಿ. ಪ್ರಕೃತಿಗೆ ಅದರದ್ದೇ ಆದ ನಿಯಮಗಳಿವೆ. ನೀರು ಕಟ್ಟಿ ನಿಲ್ಲಿಸಲು,

ಕಲ್ಲುಗಳನ್ನು ರಾಶಿ ಹಾಕಲು ಪ್ರಯತ್ನಿಸಬೇಡಿ. ನೀವಲ್ಲಿಗೆ ಬಂದಿರುವುದು ನಿಮ್ಮ ಅರಿವನ್ನು ಹೆಚ್ಚಿಸಿಕೊಳ್ಳಲು ಎಂಬುದು ನೆನಪಿರಲಿ. ಚಾಕಲೇಟ್‌ನ ಸಿಪ್ಪೆಯಿಂದ ಹಿಡಿದು, ನಿಮ್ಮ ಹರಿದು ಹೋದ ಬೂಟಿನ ವರೆಗೂ ಏನನ್ನೂ ಕಾಡಿನಲ್ಲಿ ಎಸೆಯಬೇಡಿ. ನಿಮಗೆ ಸಂತೋಷ ಹಾಗೂ ಚೈತನ್ಯ ನೀಡಿದ ಕಾಡಿಗೆ ದ್ರೋಹವೆಸಗಬೇಡಿ. ಅಪಾಯಕಾರೀ ಸಾಹಸಗಳನ್ನು ಮಾಡಲು ಹೋಗಬೇಡಿ. ಸಣ್ಣ ತಪ್ಪಾದರೂ ಕಾಡಿನಲ್ಲಿ ನಿಮಗೆ ಸಕಾಲದಲ್ಲಿ ಸರಿಯಾದ ಚಿಕಿತ್ಸೆ ಸಿಗಲಾರದು.



ಎಷ್ಟು ದೂರ ನಡೆಯಬೇಕು, ಎಂಥ ಹಾದಿಯಲ್ಲಿ ನಡೆಯಬೇಕು, ಎಷ್ಟು ಹೊತ್ತಿಗೆ ಮುಗಿಸಿ ಹಿಂದಿರುಗಬೇಕು. ಕಾಡಿನಲ್ಲಿ ಹೇಗೆ ವರ್ತಿಸಬೇಕು ಎಂಬುದನ್ನೆಲ್ಲ ಆಯೋಜಕರು ಚಾರಣದ ಪ್ರಾರಂಭದಲ್ಲೇ ಎಲ್ಲರಿಗೂ ತಿಳಿ ಹೇಳಬೇಕು. ತೀರಾ ದೊಡ್ಡ ತಂಡಗಳು ಬೇಡ. ಜಾತ್ರೆಯಾಗಿಬಿಡುತ್ತೆ. ಔಷಧೀಯ ಸಸ್ಯಗಳ ಮಾಹಿತಿಯಿರುವವರು, ಅಪ್ಪುಸಸ್ಯಗಳ ಬಗೆಗೆ ತಿಳುವಳಿಕೆಯಿರುವವರು, ಕೀಟ ತಜ್ಞರು, ಪ್ರಾಣಿ-ಪಕ್ಷಿಗಳ ಬಗ್ಗೆ ಜ್ಞಾನವಿರುವವರು, ಅರಣ್ಯಶಾಸ್ತ್ರದಲ್ಲಿ ಅನುಭವವಿರುವವರು, ಹಾಗೆಂದ ಮಾತ್ರಕ್ಕೆ ಅವರೇನೂ ಯೂನಿವರ್ಸಿಟಿಯಿಂದಲೇ ಬಂದವರಾಗಿರಬೇಕಿಲ್ಲ, ಸ್ಥಳೀಯ ಪ್ರಜ್ಞಾವಂತರಾಗಿದ್ದರೂ ಸಾಕು, ಅವರುಗಳಿದ್ದರೆ ಚಾರಣ ಒಂದು ಪದವಿಯಾನದಷ್ಟೇ ಅರ್ಥಪೂರ್ಣವಾಗಿರುತ್ತದೆ.

ಕಾಡಿನಲ್ಲಿ ಪೊದೆಗಳ ನಡುವೆ ಅರ್ದ ಇಜಾರು (ಚೆಡ್ಡಿ) ದರಿಸಿ ನಡೆಯುವುದು ಅಷ್ಟು ಸುರಕ್ಷಿತವಲ್ಲ. ಕಾಲು ಪೂರ್ತಿ ಮುಚ್ಚುವಂಥ ಪೂರ್ಣ ಪ್ರಮಾಣದ ಪ್ಯಾಂಟ್ ದರಿಸುವುದು ಒಳ್ಳೆಯದು. ಮುಳ್ಳು ತರಚುವುದು, ಎಡವಿ ಬಿದ್ದಾಗ ಆಗಬಹುದಾದ ಗಾಯಗಳು, ಹಾವು ಕಡಿತ ಮುಂತಾದ ಸಂದರ್ಭಗಳಲ್ಲಿ ಅನಾಹುತದ ಪ್ರಮಾಣವನ್ನು ಕಡಿಮೆ ಮಾಡುತ್ತದೆ. ಹಗುರವಾದ ಹತ್ತಿಯ ಟೀ ಷರ್ಟ್, ಜೀನ್ಸ್ ಪ್ಯಾಂಟ್ ಸರಳವಾಗಿ, ಸುಲಲಿತವಾಗಿ ಈ ಉದ್ದೇಶಕ್ಕೆ ಹೊಂದಿಕೆಯಾಗುತ್ತದೆ. ಚಾರಣವನ್ನು ಸಂಘಟಿಸುವ ಮೊದಲು ಅರಣ್ಯ ಇಲಾಖೆಯ ಅನುಮತಿ ಕಡ್ಡಾಯವಾಗಿದ್ದು, ಅದನ್ನು ಹಲವು ದಿನಗಳ ಮುಂಚೆಯೇ ಪಡೆಯುವುದು ಅಗತ್ಯ.

ನಿಮ್ಮ ಮೊಬೈಲ್ ಫೋನ್ ಹಾಗೂ ಕ್ಯಾಮೆರದ ಬ್ಯಾಟರಿಯನ್ನು ಪೂರ್ಣ ಪ್ರಮಾಣದಲ್ಲಿ ಚಾರ್ಜ್ ಮಾಡಿಟ್ಟುಕೊಂಡು ಸಿದ್ಧವಾಗಿರಿ. ನಿಂತಲ್ಲೆಲ್ಲಾ, ನೋಡಿದೆಡೆಯಲ್ಲೆಲ್ಲಾ ಜ್ಞಾನದ ಮಹಾಪೂರವೆ ಹರಿಯುತ್ತಿರುವುದರಿಂದ ಕಾಡಿಗೆ ಹೋದಾಗ ಊರಿನ ಹರಟೆಯನ್ನು ಅಲ್ಲಿಯೂ ಮುಂದುವರೆಸುವುದು ಬೇಡ. ಕಾಡಿನ ರಹಸ್ಯ ವಿಶ್ವವನ್ನು ಅರಿಯಲು ಶೈಕ್ಷಣಿಕ ಉದ್ದೇಶದ ಚಾರಣ ನಮಗೆ ಹೊಸ ಜಗತ್ತನ್ನೆ ತೆರೆದಿಡುತ್ತದೆ.



ಕಾಡಿನ ನಡುವೆ ಇನ್ಯಾವುದೊ ಉಪಹಾದಿ ಕಾಣಿಸಿತೆಂದು ಒಬ್ಬಿಬ್ಬರು ಅದರಲ್ಲಿ ಕ್ರಮಿಸಬೇಡಿ. ಗುಂಪಿನಿಂದ ಬೇರೆಯಾಗಿ ತಪ್ಪಿಸಿಕೊಂಡು ಪಜೀತಿಗೊಳಗಾಗುವ ಸಾಧ್ಯತೆಯಿರುತ್ತದೆ. ಎಲ್ಲರಿಗಿಂತ ಮುಂದೆಯಿರುವ ಮಾರ್ಗದರ್ಶಕ ಹಾಗೂ ಎಲ್ಲರಿಗಿಂತ ಹಿಂದೆ ಇರುವ ಟ್ರೆಕ್ಕಿಂಗ್ ಮ್ಯಾನೇಜರ್ ನಡುವೆಯೇ ಉಳಿದೆಲ್ಲಾ ಚಾರಣಿಗರು ಇರುವುದು ಅಗತ್ಯ.

ಯಾವ ಕಾರಣಕ್ಕೂ ಕಾಡಿನಲ್ಲಿ ಬೆಂಕಿ ಹಾಕಬೇಡಿ. ಅನಿವಾರ್ಯವಾಗಿ ಹಚ್ಚಿದ ಬೆಂಕಿಯನ್ನು ನೀರು ಹಾಕಿ ಸಂಪೂರ್ಣವಾಗಿ ನಂದಿಸಿ. ಅಪ್ಪಿತಪ್ಪಿಯೂ ಕಾಡ್ಗಿಚ್ಚಿಗೆ ಕಾರಣವಾಗಬೇಡಿ.

ತೀರಾ ಅಕಸ್ಮಿಕವಾಗಿ ಕಾಡಿನಲ್ಲಿ ತಪ್ಪಿಸಿಕೊಂಡರೆ ಎಲ್ಲಿದ್ದೀರೋ ಅಲ್ಲಿಯೇ ಸ್ವಲ್ಪ ಎತ್ತರದ ಸುರಕ್ಷಿತ ಸ್ಥಳಕ್ಕೆ ಹೋಗಿ ನಿಲ್ಲಿ. ಗಾಬರಿ ಬೀಳಬೇಡಿ, ಸುಧಾರಿಸಿಕೊಳ್ಳಿ, ಧೈರ್ಯ ತಂದುಕೊಳ್ಳಿ. ನಿಮ್ಮಲ್ಲಿ ವಿಷಲ್ ಇದ್ದಲ್ಲಿ ನಿರಂತರವಾಗಿ ಊದಿ. ಖಚಿತತೆ ಇಲ್ಲದಿದ್ದಲ್ಲಿ ಎತ್ತ ಕಡೆಯೂ ನಡೆಯಬೇಡಿ. ಸುತ್ತ ಮುತ್ತ ಗಮನಿಸಿ, ಪರಿಸ್ಥಿತಿಯನ್ನು ಅವಲೋಕಿಸಿ. ನಿಮ್ಮ ತಂಡವೂ ನಿಮ್ಮನ್ನು ಹುಡುಕಲು ಪ್ರಯತ್ನಿಸುತ್ತಿರುತ್ತದೆ. ಮಳೆ ಅಥವಾ ಮಂಜು ಸುರಿಯುತ್ತಿದ್ದಲ್ಲಿ ನಿಮ್ಮ ಕೂಗು ನಿಮ್ಮ ಸಂಗಾತಿಗಳಿಗೆ ತಲುಪುವುದಿಲ್ಲ, ನೆನಪಿಡಿ. ತಾಳ್ಮೆಯಿಂದ ಮುಂದಿನ ನಡೆಯನ್ನು ಯೋಜಿಸಿ. ಗಾಬರಿ, ಆತಂಕ ನಿಮ್ಮ ದೇಹದ ಶಕ್ತಿಯನ್ನು ಕುಗ್ಗಿಸುತ್ತವೆ. ಭಯ ನಿಮ್ಮನ್ನು ಹೊಸ ಪ್ರಯತ್ನಕ್ಕೆ ಪ್ರೇರೇಪಿಸಲೂ ಬಹುದು ಹಾಗೆಯೇ ನಿಮ್ಮನ್ನು ವಿಚಲಿತಗೊಳಿಸಲೂ ಬಹುದು. ಸಿಕ್ಕ ನೀರು, ಗುರುತಿಸಬಹುದಾದ ಹಣ್ಣನ್ನು ತಿನ್ನಿ, ತೊಂದರೆಯಿಲ್ಲ. ತೀರಾ ಸುಸ್ತಾದರೆ ನಿದ್ರೆ ಮಾಡಿ, ಮುಂದಿನ ಪ್ರಯತ್ನಕ್ಕೆ ಚೈತನ್ಯ ಹಾಗೂ ಧೈರ್ಯ ಬರುತ್ತದೆ. ಸಾಧ್ಯವಾದಲ್ಲಿ ಸಣ್ಣದಾಗಿ ಬೆಂಕಿ ಹಾಕಿ, ಹೆಚ್ಚು ಹೊಗೆ ಬರುವಂತೆ ಹಸಿ ಸೊಪ್ಪನ್ನು ಬೆಂಕಿಗೆ ಹಾಕಿ, ಇದರಿಂದ ಉಪದ್ರವಕಾರಿ ಕೀಟಗಳನ್ನು ದೂರವಿಡಬಹುದು ಹಾಗೂ ನಿಮ್ಮನ್ನು ಹುಡುಕುವವರಿಗೆ ಹೊಗೆಯ ಮೂಲ ಸಹಾಯ ಮಾಡಬಹುದು. ಗಾಯಗೊಂಡಿದ್ದಲ್ಲಿ ಹೆಚ್ಚು ಆಯಾಸಗೊಳ್ಳುತ್ತೀರಿ. ವಿಷಲ್ ಊದಿ ಗಮನ ಸೆಳೆಯಿರಿ. ನೆಟ್‌ವರ್ಕ್ ಇದ್ದಲ್ಲಿ ಮೊಬೈಲ್ ಫೋನ್ ನೀವು ನಿಮ್ಮ ತಂಡವನ್ನು ಪುನಃ ಸೇರಲು ಸಹಾಯ ಮಾಡುತ್ತದೆ. ಎಲ್ಲವೂ ಸುಖಾಂತ್ಯವಾದ ಮೇಲೆ ಹೊಗೆ ಏಳಿಸಲು ಹಾಕಿದ್ದ ಬೆಂಕಿಯನ್ನು ನಂದಿಸಿ.



ಮರದ ಮೇಲಿರುವ ಆರ್ಕಿಡ್‌ಗಳು, ತೊಗಟೆಯಡಿ ವಾಸಿಸುವ ಹುಳುಹುಪ್ಪಟೆಗಳು, ಕಪ್ಪೆಗಳು, ಪೊಟರೆಯ ಪಕ್ಷಿಗಳು, ನೆಲದಡಿಯಿಂದ ಉದ್ಭವವಾಗುವ ಅಣಬೆಗಳು, ಯಾವುದೋ ಕೊರಕಲಿನಿಂದ ಜಿನುಗಿ ಬೃಹತ್ ನದಿಗೆ ಜೀವನೀಡುವ ಸರುಕಲುಗಳು, ಲಕ್ಷಾಂತರ ಜೀವಿಗಳಿಗೆ ಆವಾಸಸ್ಥಾನವಾಗಿರುವ ಜವುಗು ಪ್ರದೇಶಗಳು, ತನ್ನದೇ ಆದ ಜೀವವೈವಿಧ್ಯ ಪಡೆದಿರುವ ನಮ್ಮ ಲೆಕ್ಕದ ಬಂಜರು ಪ್ರದೇಶ, ಮರಗಳು ಬೇರಿಳಿಸಿ ಬಾಷ್ಪೀಕರಿಸುವ ನೀರು, ಮೇಲ್ಮಣ್ಣಿನ ಸೂಕ್ಷ್ಮ ಜೀವಿಗಳು, ಕಲ್ಲಿನಡಿಯ ನೀರಿನ ಸಂಗ್ರಹ, ದೋಣಿಗಳೊಳಗಿನ ಸರೀಸೃಪಗಳು ಇವುಗಳನ್ನು ಗಮನಿಸಬೇಕು. ಸೀಬೆಗಿಡದ ಮೇಲಿನ ಅಳಿಲು, ಪುಕ್ಕ ಒಣಗಿಸುವ ನೀರು ಕಾಗೆ, ಕಲ್ಲಿನ ಸಂದಿಯ ಏಡಿ, ಮುಟ್ಟಿದರೆ ಉಂಡೆಯಾಗುವ ಅಡಕೆ ಹುಳ, ಕೆಸರಿನ ಪಕ್ಕದ ಕಪ್ಪೆ, ಸಮೀಪಿಸಿದರೆ ಹಾರುವ ಚಿಟ್ಟೆ, ಬಿಸಿಲು ಕಾಯಿಸುವ ಆಮೆ, ಮುಟ್ಟಿದರೆ ಮುನಿಯುವ ಮಿಮೋಸಾ ಪುಡಿಕಾ, ಗಾಳಿಗೆ ತೊನೆದಾಡುವ ವೃಕ್ಷಗಳು, ಬಿದ್ದಲ್ಲೇ ಕುಂಬಾಗುತ್ತಿರುವ ಮಹಾಮರಗಳು, ಸದ್ದಿಲ್ಲದೇ ಎದ್ದು ನಿಲ್ಲುವ ಅಣಬೆಗಳು ಇವೆಲ್ಲವೂ ಸೇರಿಯೇ ನಮ್ಮ ಕಾಡುಗಳಾಗಿವೆ.

ಭೂಮಿಯ ನಿರಂತರ ಚಲನೆಗೂ, ನಾವು ಉಸಿರಾಡುವ ಗಾಳಿಗೂ, ಹವಾಮಾನ ಬದಲಾವಣೆಗೂ, ಬೆಟ್ಟಗುಡ್ಡಗಳ ಆಕಾರಕ್ಕೂ, ಉಕ್ಕುವ ಸಮುದ್ರಕ್ಕೂ, ಚೆಲ್ಲಾಡಿ ಹರಡಿರುವ ಮರುಭೂಮಿಗೂ, ನಿರ್ಲಿಪ್ತವಾಗಿರುವ ಹಿಮ ಪ್ರದೇಶಕ್ಕೂ, ನದಿ-ತೊರೆಗಳು ಹರಿಯುವ ದಿಕ್ಕು-ವೇಗಕ್ಕೂ, ನೀರಿನ ಮೂಲಗಳನ್ನಾಧರಿಸಿ ನಭದೆತ್ತರಕ್ಕೆ ನಿಂತಿರುವ ವೃಕ್ಷ ಸಂಪತ್ತಿಗೂ, ಹಸಿರಿನ ಆಶ್ರಯದಲ್ಲಿ ನೆಲೆ ನಿಂತಿರುವ ಸೂಕ್ಷ್ಮ ಜೀವಿಗಳಿಂದ ಹಿಡಿದು, ಬೃಹದಾಕಾರದ ಪ್ರಾಣಿಗಳವರೆಗೂ ಇರುವ ಪರಸ್ಪರ ಸಂಬಂಧ, ಮಿಳಿತಗಳು ಹೇಗಿವೆಯೆಂದರೆ, ಇವುಗಳಲ್ಲಿ ಯಾವುದಾದರೊಂದರಲ್ಲಿ ಸೂಕ್ಷ್ಮ ಬದಲಾವಣೆಯಾದರೆ, ಉಳಿದೆಲ್ಲವುದರಲ್ಲಿ ಪೂರಕ ವಿಪ್ಲವಗಳು ಸಂಭವಿಸುತ್ತವೆ, ನಿಮ್ಮೆದುರಲ್ಲಿರುವ ಗಿಡಕ್ಕೆ ಹಸಿರು ಬಣ್ಣ ಬರಲು ಕಾರಣ ಮಣ್ಣಿನಲ್ಲಿದೆಯೋ? ಅದು ನೀರಿನಿಂದ ಬಂತೋ? ಬೀಜದ ಪ್ರಭಾವವೋ? ವಾತಾವರಣವೋ? ಸೂರ್ಯನ ಬೆಳಕೋ? ಯಾವುದೇ ನಿರ್ದಿಷ್ಟ ಕಾರಣವನ್ನು ನೀಡಲು ಸಾಧ್ಯವಿಲ್ಲ. ಪ್ರತಿಯೊಂದಕ್ಕೂ ಪ್ರತಿಯೊಂದೂ ಕಾರಣವಾಗಿದೆ. ಕ್ರಿಯೆಯಿಲ್ಲದೆ ಪ್ರವಾಹವಿಲ್ಲ, ಚಲನೆಯಿಲ್ಲದೇ ಜೀವವಿಲ್ಲ, ಜೀವವಿಲ್ಲದೇ ಚೈತನ್ಯವಿಲ್ಲ, ಚೈತನ್ಯವಿಲ್ಲದೇ ಪ್ರಕ್ರಿಯೆಯಿಲ್ಲ.

ಚಾರಣ ತಾಣಗಳ ಕಡಿದಾದ ತುದಿಯನ್ನು ಏರಿದರೆ ಅವಿಸ್ಮರಣೀಯ ದೃಶ್ಯಗಳು ಕಣ್ಣು ಹಾಯಿಸಿದೆಡೆಯೆಲ್ಲಾ ತೆರೆದುಕೊಳ್ಳುತ್ತವೆ. ಎದುರುನಿಂದ ದಾವಿಸುವ ಮೋಡಗಳು ನಮ್ಮ ಸುತ್ತ ಸುಳಿದು ಅನಂತ ಆಕಾಶದಲ್ಲಿ ಲೀನವಾಗುವ ಬಗೆ ಅನುಭವಿಸಿಯೇ ತಿಳಿಯಬೇಕು. ಕಣ್ಣೆದುರಿನ ಕಣಿವೆ, ಕಮರಿಗಳು ಇದ್ದಕ್ಕಿದ್ದಂತೆ ಅಂತರ್ದಾನವಾಗುವುದು, ನೋಡ ನೋಡುತ್ತಿದ್ದಂತೆ ನಿರಭ್ರವಾಗಿ ಗೋಚರಿಸಿ ಶೋಲಾ ಕಾಡುಗಳ ದರ್ಶನ ಮಾಡಿಸುವ ಬಗೆ ರಮಣೀಯವಾದುದು.

- ಧನಂಜಯ ಜೀವಾಳ .ಬಿ .ಕೆ



ಕತ್ತಲೆಕಾನು

ಸುತ್ತಲು ಕತ್ತಲು ಮುಗಿಲಲ್ಲಿ ಕಾರ್ಮೋಡಗಳು,

ಮುಗಿಲ ಕಾಣಲು ಮುಚ್ಚಿದೆ ಕಾಡುಮರಗಳು,

ಉತ್ತರ ಕನ್ನಡ ದಕ್ಷಿಣ ದಿಕ್ಕಿನ ಘಟ್ಟದ ಮೇಲಿನ ಅಡವಿಯಿದು,

ಹಗಲಲಿ ಕಾಣದ ಇರುಳಲಿ ಬರಲಾಗದ,

ದಟ್ಟನೆ ಹಸುರಿನ ಕತ್ತಲೆ ಕಾನನವಿದು.

ಅಡವಿಯ ಅಡಿಯಲಿ ಇಳಿದು ಹೋದರಲಿ

ಶರಾವತಿಯು ಹರಿಯುತ್ತಿರುವಳು.

ನೀಲಿ ನಭದ ರಂಗನು ಅವಳ ಒಡಲಲಿ ಹರಿಸಿ,

ರಂಗಿನ ಸುಂದರಿ ನೀಲಿ ರಂಗಿನಲಿ ಝಗಝಗನೆ ಹೊಳೆಯುತ್ತಿರುವಳು.

ಕಣಿವೆಯ ಸೃಷ್ಟಿಸಿ ನಯನಗಳನು ರಂಜಿಸಿ,

ತನ್ನ ವೈಭವವನ್ನು ತೋರುತ್ತಿರುವಳು,

ಶರಾವತಿ ಕರುನಾಡ ಮನೆಮಗಳು.

ಹೋದರೆ ಚಾರಣ ಮಾಡಬೇಕೆನಿಸುವ ಕತ್ತಲೆಕಾನನವಿದು,

ಹೋದರೆ ಚಾರಣ ಮಾಡದೆಬಂದರೆ ಕತ್ತಲೆಕಾನು ಕತ್ತಲಾಗೆ ಉಳಿದುಬಿಡುವುದು.

- ಅನಿಕೇತನ.



ಆ ಪ್ರಕೃತಿ ಮಾತೆ ಯಾವಾಗಲೂ ಎಲ್ಲಾರಿಗೂ ತುತ್ತು ಇಟ್ಟಿಯೇ ಇರುತ್ತಾಳೆ.



ಮುಂಜಾನೆಯ ವನ ಸಂಚಾರದಲಿ. . .

- ಕಾರ್ತಿಕ್ .ಎ .ಕೆ